ಶ್ರೀ ಬಿ. ಬೈರಪ್ಪಾಜಿ.—ಈ ಬಗ್ಗೆ ಸಾಯಿಲ್ ಕನ್‌ಸರ್ವೇಷನ್‌ನವರು ೫೦ ಪರ್ಸೆಂಟ್ ಅಷ್ಟೂ ಕೂಡ ಹಣ ಖರ್ಚು ಮಾಡಿಲ್ಲಾ. ಸರ್ಕಾರದವರು ಈ ಕೆಲಸ ಮಾಡಬೇಕೆಂದು ಒಂದು ಆಜ್ಞೆ ಹೊರಡಿಸಿದ್ದರೂ ಕೂಡ ಅವರು ಅದಕ್ಕೆ ಸರಿಯಾದ ವ್ಯವಸ್ಥೆ ಮಾಡಲಿಲ್ಲಾ. ಹಣ ಹಾಗೆಯೇ ಉಳಿದಿದೆ. ಹಿಂದೆ ಈ ಕೆಲಸವನ್ನು ಪಿ.ಡಬ್ಲ್ಯು.ಡಿ. ಯವರು ಪ್ರಾರಂಭ ಮಾಡಿದ್ದರು. ಆಲ್ಲಿ ಬೇಕಾದಷ್ಟು ಸಿಬ್ಬಂದಿ ಇದೆ. ಅವರ ಮುಖಾಂತರ ಕಟ್ಟಿಸುವುದಕ್ಕೆ ತಾವು ಏತಕ್ಕೆ ವಿಚಾರಿಸು ಮಾಡಲಿಲ್ಲಾ ?

ನೀವು ಈಗ ಈ ಕೆಲಸಗಳನ್ನು ಮಾಡಿಸಬೇಕಾದರೆ ಅಸಿಸ್ಟೆಂಟ್ ಇಂಜಿನೀಯರ್‌ರವರಿಂದ ಮಾಡಿಸಬೇಕಾಗುತ್ತದೆ. ಎರಡು ತಾಲೂಕಿಗೆ ಒಬ್ಬರು ಅಸಿಸ್ಟೆಂಟ್ ಇಂಜಿನಿಯರ್ ಇರುವುದರಿಂದ ಅವರೇ ಈ ಎಲ್ಲಾ ತೆಂಗಿನ ಅಣೆಗಳನ್ನು ಕಟ್ಟಿಸುವುದಕ್ಕೆ ಸಾಧ್ಯವೇ ? ಹಿಂದೆ ಈ ಕೆಲಸಗಳನ್ನು ಪಿ.ಡಬ್ಲ್ಯು.ಡಿಯವರೇ ಏನು ಮಾಡಿದ್ದರು ಅದೇರೀತಿಯಾಗಿ ಈಗಲೂ ಕೂಡ, ಹಿಂದೆ ಅವರು ತುರುವೇಕೆರೆ ತಾಲ್ಲೂಕಿನ ೧೪ ಹಳ್ಳಿಗಳಿಗೆ ಇದನ್ನು ಏನು ಮಂಜೂರು ಮಾಡಿದ್ದರು ಆ ಯೋಜನೆಗಳ ಕೆಲಸಗಳನ್ನು ತೆಗೆದುಕೊಂಡು, ಆ ಬಗ್ಗೆ ತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಆ ಕೆಲಸಗಳನ್ನು ಪೂರೈಸಿಕೊಡುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಸಾಯಿಲ್ ಕನ್ಸರ್ವೇಷನ್ ಬಾಬಿಗೆ ಗೊತ್ತುಮಾಡಿರತಕ್ಕ ಮೊಬಲಗಿನಲ್ಲಿ ಕೆಲವು ಭಾಗವನ್ನು ಈಗಾಗಲೇ ಖರ್ಚುಮಾಡಿದ್ದೇವೆ. ಸುಮಾರು ೧೧ ಜಿಕ್‌ಅಪ್‌ಗಳನ್ನು ಪಂಗಿಸಿದ್ದೇವೆ. ಮುಂದಿನ ವರ್ಷ ಸುಮಾರು ೧೦ ಲಕ್ಷ ರೂಪಾಯಿಗಳನ್ನು ಇದಕ್ಕೆ ಖರ್ಚುಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಕಾವಲುಗಾರಿ ಇಲಾಖೆಯ ಸಿಬ್ಬಂದಿಗಿಂತಲೂ ನಮ್ಮ ಸಿಬ್ಬಂದಿ ಹೆಚ್ಚು ಪರಿಣತಿಯನ್ನು ಈ ವಿಷಯದಲ್ಲಿ ಪಡೆದಿದ್ದಾರೆ. ಆದ್ದರಿಂದ ಇನ್ನೂ ಹೆಚ್ಚಿನ ರೀತಿಯಲ್ಲಿ ಕೆಲಸಗಳನ್ನು ಮಾಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎಸ್. ಪಿ. ಗಂಗಾಧರಪ್ಪ.—ಸಬ್ ಸಾಯಿಲ್ ವಾಟರ್ ಕೆಳಗಡೆ ತೆಂಗಿನ ಅಣೆ ಅವಶ್ಯಕವಿದೆ. ಇದರ ಬಗ್ಗೆ ಸರ್ಕಾರದವರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಮತ್ತೆ ಇನ್ನು ಮುಂದೆ ಇದನ್ನು ಹೆಚ್ಚಾಗಿ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತಾರೆಯೇ ?

ಶ್ರೀ ಬಿ. ಎಲ್. ಗೌಡ.—ಇದನ್ನೆಲ್ಲಾ ನಾವು ಸರ್ವೆ ಮಾಡಿಸಿ ಲಿಸ್ಟ್ ತಯಾರುಮಾಡಿ ಆದ್ಯತೆಯ ಮೇಲೆ ಕೆಲಸಗಳನ್ನು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಉಪಾಧ್ಯಕ್ಷರು.—ಈಗ ಪ್ರಶ್ನೋತ್ತರ ವೇಳೆ ಮುಗಿಯಿತು.

## ಪ್ರಕಟಣೆ.

ಉಪಾಧ್ಯಕ್ಷರು. —ಮಾರ್ಚ್ ೧೫, ೧೯೫೩ ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ಮಾರ್ಚ್ ೧೬ ರಿಂದ ೩೧ರ ವರೆವಿಗೆ ಈ ಕೆಳಕಂಡ ಕಾರ್ಯಕಲಾಪಗಳನ್ನು ಕೈಕೊಂಡು ಹಾಗೂ ಪೂರ್ಣ ಗೊಳಿಸಲು ಶಿಫಾರಸು ಮಾಡಿದೆ.

| | |
|---|---|
| ೧೬ನೇ ಮಾರ್ಚ್ ೧೯೫೩ | ರಾಜ್ಯಪಾಲರ ಭಾಷಣಕ್ಕೆ ಕೃತಜ್ಞತಾ ಸೂಚನೆಯ ಪ್ರಸ್ತಾಪದ ಮೇಲೆ ಚರ್ಚೆ. |
| ೧೭ನೇ ಮಾರ್ಚ್ ೧೯೫೩ | ರಾಜ್ಯಪಾಲರ ಕೃತಜ್ಞತಾ ಭಾಷಣದ ಮೇಲೆ ಚರ್ಚೆ ಹಾಗೂ ಮುಖ್ಯಮಂತ್ರಿಗಳಿಂದ ಉತ್ತರ. |
| ೧೮ನೇ ಮಾರ್ಚ್ ೧೯೫೩ | ಬೆಳಿಗ್ಗೆ ೧೧ ಗಂಟೆಗೆಯಿಂದ ೧ ಗಂಟೆಯವರೆಗೆ ಪ್ರಶ್ನೋತ್ತರಗಳು ಹಾಗೂ ಇತರ ಕಾರ್ಯಕಲಾಪಗಳು ೩ ಗಂಟೆಗೆ ೧೯೫೩–೫೪ನೇ ಸಾಲಿನ ಆಯವ್ಯಯ ಮಂಡನೆ. |
| ಮಾರ್ಚ್ ೨೧ ರಿಂದ ೨೫ರ ವರೆಗೆ | (೧) ಅನುಪೂರಕ ಅಂದಾಜುಗಳ ಮಂಡನೆ ಹಾಗೂ ೧೯೫೩–೫೪ನೇ ಸಾಲಿನ ಆಯವ್ಯಯದ ಅಂದಾಜಿನ ಮೇಲೆ ಸಾಮಾನ್ಯ ಚರ್ಚೆ.<br>(೨) ಅನುಪೂರಕ ಬೇಡಿಕೆಗಳ ಬಗ್ಗೆ ಚರ್ಚೆ ಹಾಗೂ ಮತಕ್ಕೆ ಹಾಕುವುದು ಮತ್ತು ಅನುಪೂರಕ ಅಂದಾಜಿಗೆ ಸಂಬಂಧಿಸಿದಂತೆ ಹಣ ವಿನಿಯೋಗದ ವಿಧೇಯಕವನು ಅಂಗೀಕರಿಸುವುದು. |

| | |
|---|---|
| ೨೮ನೇ ಮಾರ್ಚ್ ೧೯೮೩ | ಲೇಖಾನುದಾನಗಳ ಮೇಲೆ ಚರ್ಚೆ ಹಾಗೂ ಹಣ ವಿನಿಯೋಗದ ವಿಧೇಯಕವನ್ನು ಆಂಗೀಕರಿಸುವುದು. |
| ಮಾರ್ಚ್ ೨೯ ರಿಂದ ೩೧ ರವರೆಗೆ | ಸರ್ಕಾರಿ ಕಾರ್ಯಕಲಾಪಗಳು. |

ಈ ಶಿಫಾರಸ್‌ಗಳಿಗೆ ಸಭೆ ಅನುಮೋದಿಸುತ್ತದೆಯೆಂದು ನಾನು ನಂಬುತ್ತೇನೆ.

## ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆಯ ಪ್ರಸ್ತಾವ.

ಶ್ರೀ ಎಂ. ವೀರಪ್ಪ ಮೊಯಿಲಿ(ಕಾರ್ಕಳ).— ಸನ್ಮಾನ್ಯ ಅಧ್ಯಕ್ಷರೇ, ನಾನು ನಿನ್ನೆಯದಿವಸ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ. ಸನ್ಮಾನ್ಯ ಮುಖ್ಯ ಮಂತ್ರಿಗಳು ಶಿವಮೊಗ್ಗದಲ್ಲಿ ಭಾಷಣ ಮಾಡುತ್ತಾ ಹಿಂದಿನ ಮುಖ್ಯಮಂತ್ರಿಗಳಾದ ಶ್ರೀಮಾನ್ ಗುಂಡೂರಾಯರು ಭ್ರಷ್ಟಾಚಾರದ ಗಂಗೋತ್ರಿ ಎಂದು ಮುಂತಾಗಿ ಹೇಳಿದ್ದಾರೆ. ಮಾನ್ಯ ದೇವೇಗೌಡರು ಈಗ ಸಭೆಯಲ್ಲಿಲ್ಲ. ಅವರು ನಿನ್ನೆಯ ದಿವಸ ಹೇಳಿದರು, ಈ ಸರ್ಕಾರ ಅಧಿಕಾರಕ್ಕೆ ಬಂದು ಕೇವಲ ಎರಡು ತಿಂಗಳು ಆಗಿದೆ. ಅಷ್ಟು ಮಾತ್ರ ನೀವು ಹೇಳಬೇಕು ಎಂದು. ಹಿಂದಿನ ವಿಚಾರಗಳನ್ನು ಪ್ರಸ್ತಾಪ ಮಾಡತಕ್ಕ ಅಗತ್ಯ ಏನು ಇದೆ ಎನ್ನುವುದನ್ನೂ ಅವರು ಹೇಳಿದ್ದಾರೆ. ಅವರು ಈ ಮಾತನ್ನು ಹೇಳದಿದ್ದರೆ ನಾನು ಈ ವಿಚಾರಕ್ಕೆ ಈಗ ಬರುತ್ತಾ ಇರಲಿಲ್ಲ. ಹೊಸ ಸರ್ಕಾರ ಬಂದು ಏನು ಭರವಸೆಗಳನ್ನು ತಮ್ಮ ಮ್ಯಾನಿಫೆಸ್ಟೋದಿಂದ ಕೊಟ್ಟಿದ್ದರೆ ಅದಕ್ಕೆ ಸರಿಯಾದಂಥ ಸನ್ಮಾಪ ಸರ್ಕಾರದಿಂದ ನಡೆದಿದೆಯೇ ? ನಮ್ಮ ಮುಂದಿರತಕ್ಕ ಸಂಪುಟಕ್ಕೆ ಈ ವಿಚಾರಗಳ ಬಗ್ಗೆ ಭದ್ರವಾಗಿ ಕೆಲಸ ಮಾಡಲಿಕ್ಕೆ ಎಷ್ಟು ಸಾಮರ್ಥ್ಯ ಇದೆ ಎನ್ನುವುದು ಬಹಳ ಪ್ರಾಮುಖ್ಯವಾದ ವಿಚಾರ. ಹಿಂದಿನ ಸರ್ಕಾರ ಕಾರ್ಯಗತ ಮಾಡಿದ ಭೂಸುಧಾರಣಾ ಮಸೂದೆ ಇಡೀ ರಾಷ್ಟ್ರದಲ್ಲಿ ಒಳ್ಳೆಯ ಹೆಸರನ್ನು ಪಡೆದಿದೆ. ನಾವು ರಾಜ್ಯದಲ್ಲಿ ಭೂನ್ಯಾಯಮಂಡಳಿಗಳನ್ನು ರಚನೆ ಮಾಡಿ ಲಕ್ಷಾಂತರಮಂದಿ ಗೇಣಿದಾರರಿಗೆ ಭೂಮಿಯನ್ನು ಕೊಟ್ಟು, ಒಡೆತನವನ್ನು ಖಾಯಂ ಮಾಡಿ ಪಹಣಿ ಕೊಟ್ಟಂಥ ಪ್ರಯೋಗ ಆರ್ಥಿಕ, ಸಾಮಾಜಿಕ ಕಾರ್ಯಕ್ಷೇತ್ರದಲ್ಲಿ ಅತಿ ಶ್ರೇಷ್ಟವಾದ ಪ್ರಯೋಗ ಎಂದು ಎಲ್ಲರೂ ಒಪ್ಪಿಕೊಂಡಿದ್ದಾರೆ. ಇದು ಕೇರಳದಲ್ಲಿ ನಡೆದಂಥ ಭೂ ಮಸೂದೆಗಿಂತ ಒಂದು ಹೆಜ್ಜೆ ಮುಂದೆ ಹೋಗಿ ನಾವು ಕೆಲಸ ಮಾಡಿದ್ದನ್ನು ಎರಡು ಕಡೆಯ ಸದಸ್ಯರೂ ಸಹ ಒಪ್ಪಿಕೊಂಡಿದ್ದಾರೆ. ಒಮ್ಮತದಿಂದ ಇದು ಮಂಜೂರಾತಿಯನ್ನು ಪಡೆದಿದೆ. ಭೂನ್ಯಾಯಮಂಡಳಿಗಳಲ್ಲಿ ಕೆಲವು ಲೋಪದೋಷಗಳು ಆಗಿವೆ, ಇಲ್ಲವೇ ಇಲ್ಲ ಎಂದು ನಾನು ಸಹ ಹೇಳುವುದಿಲ್ಲ. ಇದನ್ನು ಅನ್ವಷ್ಟಾನಕ್ಕೆ ತರುವಾಗ ಅನೇಕ ತಪ್ಪು ಒಪ್ಪುಗಳು ಆಗಿವೆ. ಆ ತಪ್ಪು ಒಪ್ಪುಗಳನ್ನೇ ಮಾನ್ಯ ಸದಸ್ಯರು ಗಳು ಹೆಚ್ಚು ಮಾಡಿ ನಾವು ಲಕ್ಷಾಂತರ ಮಂದಿಗೆ ಭೂಮಿಯನ್ನೇ ಕೊಟ್ಟಿಲ್ಲ ಎಂದು ಖಂಡಿತವಾಗಿಯೂ ಹೇಳಲಿಕ್ಕಾಗುವುದಿಲ್ಲ. ಆದರೆ ಎಲ್ಲಿ ತಪ್ಪುಗಳು ಆಗಿವೆ ಅಲ್ಲಿ ನಾವು ಶಿಕ್ಷೆ ಮಾಡೋಣ, ಮತ್ತೆ ಆ ತಪ್ಪನ್ನು ಗುರುತಿಸೋಣ. ಆ ಕಡೆ ಕುಳಿತಿರತಕ್ಕ ಹಿರಿಯ ಸದಸ್ಯರೊಬ್ಬರು ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡುವಾಗ ಭೂನ್ಯಾಯ ಮಂಡಳಿಯ ಸದಸ್ಯರೆಲ್ಲರೂ ಭ್ರಷ್ಟಾಚಾರಕ್ಕೆ ಗುರಿಯಾಗಿದ್ದಾರೆ ಎನ್ನುವ ಮಾತನ್ನು ಹೇಳಿದರು. ಅವರು ಹೇಳಿದ ಈ ಮಾತು ನಿಜವಾಗಿದ್ದರೆ ಲಕ್ಷಾಂತರ ವಂದಿ ಗೇಣಿದಾರರು ಭೂಮಾಲೀಕರಾಗುತ್ತಿರಲಿಲ್ಲ ಅವರಿಗೆ ಭೂಮಿಯೇ ಸಿಕ್ಕುತ್ತಿರಲಿಲ್ಲ. ಅವರು ಈ ರೀತಿಯಾಗಿ ಹೇಳಿರುವುದು ಈ ಸುಧಾರಣೆಗೆ ಅಪಚಾರ ಮಾಡಿದ ಹಾಗೆ ಆಗಿದೆ. ಈಗಿನ ಕಂದಾಯ ಸಚಿವರಾದ ಮಾನ್ಯ ವಿ. ಎಲ್. ಪಾಟೀಲ್ ಅವರು ಇದ್ದಾರೆ. ಅವರೂ ಕೂಡ ಭೂನ್ಯಾಯಮಂಡಳಿಯ ಸದಸ್ಯರಾಗಿದ್ದರು. ಇವರ ಮಗ ಕೂಡ ಭೂನ್ಯಾಯಮಂಡಳಿಯ ಸದಸ್ಯರಾಗಿರತಕ್ಕಂಥ ಎಲ್ಲರಿಗೂ ಗೊತ್ತಿದೆ. ೧೯೭೮ ರ ಕರ್ನಾಟಕ ಲಾ ಜರ್ನಲ್–೨ ರಲ್ಲಿ ಪುಟ ೩೫೯ ರಲ್ಲಿ ಇವರು ಏನು ಮಾಡಿದ್ದಾರೆಂದು ಸ್ಪಷ್ಟವಾಗಿ ಕಾಣಿಸಿದ್ದಾರೆ. ಈಗಿನ ಕಂದಾಯ ಸಚಿವರು ಭೂನ್ಯಾಯ ಮಂಡಳಿಯ ಸದಸ್ಯರಾಗಿ ಏನು ಮಾಡಿದ್ದಾರೆನ್ನುವುದನ್ನು ಸ್ಪಷ್ಟವಾಗಿ ಕಾಣಿಸಿದ್ದಾರೆ. ಇವರೂ ಸಹ ಭೂಸುಧಾರಣಾ ಮಸೂದೆಯನ್ನು ಜಾರಿ ಮಾಡುತ್ತೇವೆಂದು ಕರ್ನಾಟಕದ ಜನತೆಗೆ ಆಶ್ವಾಸನೆ ಕೊಟ್ಟಿದ್ದಾರೆ, ಇಲ್ಲಿ ಎಲ್ಲಾ ವಿಚಾರಗಳನ್ನು ಹೇಳುವುದಕ್ಕೆ ಸಮಯಾವಕಾಶ ಇಲ್ಲ. ಆದರೆ ಸುಮಾರು ೧೫೧ ಎಕರೆ ೯ ಗುಂಟೆ ಜಾಗ ಕಬ್ಬು ಬೆಳೆಯತಕ್ಕ ಸಮೃದ್ಧಿಯಾದ ಪ್ರದೇಶ ಇದರ ಹಂಚಿಕೆ ಯಾರಿಗೆಲ್ಲಾ ಆಯಿತು ಎಂದು ಜಡ್ಜ್‌ಮೆಂಟ್‌ನಲ್ಲಿ ಸ್ಪಷ್ಟವಾಗಿ ಕಾಣಿಸಿದ್ದಾರೆ. ಈ ಭೂಮಿ ಇರತಕ್ಕದ್ದು ಚಿಂಚೋಳಿ ಗ್ರಾಮದಲ್ಲಿ, ಇವರೇ ಇದರಲ್ಲಿ ರೆಸ್ಪಾಂಡೆಂಟ್ ನಂಬರ್–೩ ಶ್ರೀ ವಿ. ಎಲ್. ಪಾಟೀಲ್ ಅವರು.